ವಿ-330 (56)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಇವರ ನಿಯಮ 330ರ ಅಡಿಯಲ್ಲಿನ ಗಮನ ಸೆಳೆಯುವ ಸೂಚನೆ ಸಂಖ್ಯೆ:56ಗೆ ಮಾನ್ಯ ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖಾ ಸಚಿವರ ಉತ್ತರ.**

ಪ್ರಶ್ನೆ:

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಡಿಯಲ್ಲಿ ಬರುವ ಗ್ರಾಹಕರ ನ್ಯಾಯಬೆಲೆ ಅಂಗಡಿಗಳ ಬಗ್ಗೆ ರಾಜ್ಯದಲ್ಲಿ ಕೆಲವು ಸಮಸ್ಯೆಗಳು ಮತ್ತು ಅವ್ಯವಸ್ಥೆಗಳು ಕಂಡುಬಂದಿದ್ದು, ರಾಜ್ಯದ ಸಾವಿರಾರು ಗ್ರಾಮಗಳಲ್ಲಿ ಆಯಾ ಗ್ರಾಮಗಳಿಗೆ ಒಳಪಡುವ ತಾಂಡಾಗಳು ಗ್ರಾಮದಿಂದ 3-4 ಕಿ.ಮೀ ದೂರವಿದ್ದು, ಅಲ್ಲಿನ ಜನರು ನ್ಯಾಯಬೆಲೆ ದಿನಸಿಯನ್ನು ತರಬೇಕಾದರೆ 3-4 ಕಿ. ಮೀ ದೂರದಿಂದ ಬಂದು ತೆಗೆದುಕೊಳ್ಳಬೇಕಾಗಿರುತ್ತದೆ. ಇದರಿಂದ ತಾಂಡಾ ಜನರಿಗೆ ತುಂಬಾ ಅನಾನುಕೂಲಗಳು ಆಗುತ್ತಿದ್ದು ಸರ್ಕಾರವು ಇದರ ಬಗ್ಗೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬುದು ವಿಷಾಧನೀಯ.

ಕೆಲವು ತಿಂಗಳ ಹಿಂದೆ ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು ಗ್ರಾಮಗಳಿಂದ ದೂರವಿರುವ ತಾಂಡಾಗಳ ಬಗ್ಗೆ ಮಾತನಾಡಿ, ಕನಿಷ್ಠ 100 ರೇಶನ್ ಕಾರ್ಡ್ ಹೊಂದಿರುವ ಪ್ರತಿಯೊಂದು ತಾಂಡಾಗಳಿಗೆ ಒಂದು ನ್ಯಾಯಬೆಲೆ ಅಂಗಡಿಯನ್ನು ಹಂಚಿಕೆ ಮಾಡಲಾಗುವುದು ಎಂದು ಘೋಷಿಸಿದ್ದರು, ಆದರೆ ಈ ಘೋಷಣೆ ಬರೀ ಘೋಷಣೆಯಾಗಿಯೇ ಉಳಿದಿದ್ದು ಇನ್ನೂ ಕಾರ್ಯ ರೂಪಕ್ಕೆ ಬಂದಿರುವುದಿಲ್ಲ, ಹಾಗೂ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಸರ್ಕಾರಿ ಆದೇಶವನ್ನು ಹೊರಡಿಸಿಲ್ಲ. ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುತ್ತದೆ ಎಂಬುದರ ಬಗ್ಗೆ ಮಾನ್ಯ ಅರಣ್ಯ ಮತ್ತು ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಉತ್ತರ:

ರಾಜ್ಯದಲ್ಲಿರುವ ಎಲ್ಲಾ ಹಾಡಿಗಳು/ತಾಂಡಗಳು/ಗೊಲ್ಲರಹಟ್ಟಿ/ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಾಲೋನಿ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಸಾರ್ವಜನಿಕ ವಿತರಣಾ ಪದ್ಧತಿ ನಿಯಂತ್ರಣ ಆದೇಶಕ್ಕೆ ದಿನಾಂಕ: 22-09-2021 ರಂದು ತಿದ್ದುಪಡಿ ಆದೇಶ ಹೊರಡಿಸಲಾಗಿದೆ.

ಅಗತ್ಯವಿರುವ ಜಿಲ್ಲೆಗಳಲ್ಲಿನ ಎಲ್ಲಾ ಹಾಡಿಗಳು/ತಾಂಡಗಳು/ಗೊಲ್ಲರಹಟ್ಟಿ/ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಾಲೋನಿ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಸಾರ್ವಜನಿಕ ವಿತರಣಾ ಪದ್ಧತಿ ನಿಯಂತ್ರಣ ಆದೇಶ 2018ರ ಸೆಕ್ಷನ್ (6) ರನ್ವಯ ಆಯಾ ಹಾಡಿ/ತಾಂಡ/ ಗೊಲ್ಲರಹಟ್ಟಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಲೋನಿಗಳಲ್ಲಿನ ಅರ್ಹ ಸ್ವ-ಸಹಾಯ/ ಸಂಘ ಸಂಸ್ಥೆಗಳು/ವ್ಯಕ್ತಿಗಳನ್ನು ಮಾತ್ರ ಪರಿಗಣಿಸುವುದು ಹಾಗೂ ಪಡಿತರ ಚೀಟಿಗಳ ಮಿತಿಯ ಬಗ್ಗೆ ಸಾರ್ವಜನಿಕ ವಿತರಣಾ ಪದ್ಧತಿ ನಿಯಂತ್ರಣ ಆದೇಶ 2016ರ ಸೆಕ್ಷನ್ 11(2) ರಲ್ಲಿ ನಿಯಮಗಳಲ್ಲಿ ಕಲ್ಪಿಸಲಾಗಿರುವ ಅವಕಾಶದನ್ವಯ ಕನಿಷ್ಠ 100 ಪಡಿತರ ಚೀಟಿಗಳಿಗೆ ಸೀಮಿತಗೊಳಿಸಿ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಲು ಅನುಮತಿಯನ್ನು ನೀಡಲಾಗಿದೆ.

ಜಿಲ್ಲೆಗಳಲ್ಲಿನ ಅಗತ್ಯಕ್ಕನುಗುಣವಾಗಿ ಹಾಡಿಗಳು/ತಾಂಡಗಳು/ಗೊಲ್ಲರಹಟ್ಟಿ/ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಾಲೋನಿ ಪ್ರದೇಶಗಳಲ್ಲಿ ಹೊಸ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅಗತ್ಯ ಕ್ರಮವನ್ನು ಕೈಗೊಳ್ಳಲು ಜಿಲ್ಲಾ ಮಟ್ಟದಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ/ಉಪನಿರ್ದೇಶಕರುಗಳಿಗೆ ಅಧಿಕಾರವನ್ನು ನೀಡಲಾಗಿದೆ.

ಅದರಂತೆ ರಾಜ್ಯದಲ್ಲಿನ ಹಾಡಿಗಳು/ತಾಂಡಗಳು/ಗೊಲ್ಲರಹಟ್ಟಿ/ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಾಲೋನಿ ಪ್ರದೇಶಗಳಲ್ಲಿ ಇದುವರೆಗೆ 376 ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದೆ.

**ಆನಾಸ 76 ಆನಾಸ 2021 (ಇ-ಆಫೀಸ್)**

(ಉಮೇಶ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

# Annexure

## District wise FPDs in Tandas

| Sl No | District | No of FPDs in Tandas |
|---|---|---|
| 1 | BAGALKOTE | 20 |
| 2 | BENGALURU | 0 |
| 3 | BENGALURU RURAL | 0 |
| 4 | BELAGAVI | 19 |
| 5 | BALLARI | 21 |
| 6 | BIDAR | 11 |
| 7 | VIJAYAPURA | 78 |
| 8 | CHAMARAJANAGARA | 3 |
| 9 | CHIKKAMAGALURU | 3 |
| 10 | CHITRADURGA | 6 |
| 11 | DAKSHINA KANNADA | 0 |
| 12 | DAVANAGERE | 14 |
| 13 | DHARWAR | 3 |
| 14 | GADAG | 22 |
| 15 | KALABURAGI | 32 |
| 16 | HASSAN | 9 |
| 17 | HAVERI | 60 |
| 18 | KODAGU | 0 |
| 19 | KOLAR | 0 |
| 20 | KOPPAL | 0 |
| 21 | MANDYA | 0 |
| 22 | MYSURU | 0 |
| 23 | RAICHUR | 13 |
| 24 | SHIVAMOGGA | 4 |
| 25 | TUMAKURU | 2 |
| 26 | UDUPI | 0 |
| 27 | UTTARA KANNADA | 0 |
| 28 | CHIKKABALLAPURA | 0 |
| 29 | RAMANAGARA | 54 |
| 30 | YADGIR | 8 |
| 31 | BANGALORE EAST | 0 |
| 32 | BANGALORE NORTH | 0 |
| 33 | BANGALORE SOUTH | 0 |
| 34 | BANGALORE WEST | - |
| | **TOTAL** | **376** |